ಕರ್ನಾಟಕ ಸರ್ಕಾರ

*ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.*

ಸಂಖ್ಯೆ:ಪಪೂಶಿಇ/ ಶೈ.ಶಾ-04/ಉ.ತ-01/2015-16. ದಿನಾಂಕ: 04 .06.2015

ಸುತ್ತೋಲೆ

ವಿಷಯ: ಪದವಿ ಪೂರ್ವ ಶಿಕ್ಷಣದ ಹಂತದಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರುಗಳಿಗೆ ತರಬೇತಿ ನೀಡುವ ಸಂಬಂಧ, 34 ವಿಷಯಗಳಲ್ಲಿ ಉತ್ತಮ ವಿಷಯ ತಜ್ಞರ ಪಟ್ಟಿಯನ್ನು ತುರ್ತಾಗಿ ನಿರ್ದೇಶನಾಲಯಕ್ಕೆ ಕಳುಹಿಸಿಕೊಡುವ ಬಗ್ಗೆ.

ಉಲ್ಲೇಖ: ಮಾನ್ಯ ನಿರ್ದೇಶಕರ ಮೌಖಿಕ ಆದೇಶ.

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, 2015-16ನೇ ಶೈಕ್ಷಣಿಕ ಸಾಲಿನಲ್ಲಿ ರಾಜ್ಯದ ಪದವಿ ಪೂರ್ವ ಶಿಕ್ಷಣದ ಹಂತದಲ್ಲಿ ಬೋಧನೆ ಮಾಡುತ್ತಿರುವ ಎಲ್ಲಾ ಉಪನ್ಯಾಸಕರುಗಳಿಗೆ 34 ವಿಷಯಗಳಲ್ಲಿ ಜಿಲ್ಲಾ ಮಟ್ಟದ ತರಬೇತಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲು ಸರ್ಕಾರ/ ನಿರ್ದೇಶಕರ ಹಂತದಲ್ಲಿ ತೀರ್ಮಾನಿಸಲಾಗಿದೆ. ಅದ್ದರಿಂದ ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಒಳಪಡುವ ಸರ್ಕಾರಿ/ಅನುದಾನಿತ/ಅನುದಾನರಹಿತ ಪದವಿ ಪೂರ್ವ ಕಾಲೇಜುಗಳಲ್ಲಿ 34 ವಿಷಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರುಗಳಲ್ಲಿ ಪ್ರತಿ ವಿಷಯದಲ್ಲಿ ಇಬ್ಬರು ಹಿರಿಯ ಅನುಭವಿ ಉಪನ್ಯಾಸಕರುಗಳನ್ನು ಆಯ್ಕೆ ಮಾಡಿ ಈ ಪತ್ರದೊಂದಿಗೆ ಲಗತ್ತಿಸಿರುವ ಅನುಬಂಧದ ಮಾದರಿಯಲ್ಲಿ ಪಟ್ಟಿ ಸಿದ್ಧಪಡಿಸಿ ಅತೀ ತುರ್ತಾಗಿ ಈ ನಿರ್ದೇಶನಾಲಯದ ಸಹಾಯಕ ನಿರ್ದೇಶಕರು, ಶೈಕ್ಷಣಿಕ ಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ಇವರಿಗೆ ವಿಳಂಬಕ್ಕೆ ಹಾಗೂ ನೆನಪೋಲೆಗೆ ಅವಕಾಶವಿಲ್ಲದಂತೆ ಮಾಹಿತಿಯನ್ನು ಮರುಟಪಾಲಿನಲ್ಲಿ ಸಲ್ಲಿಸಲು ಈ ಮೂಲಕ ತಿಳಿಸಿದೆ.

ವಿಷಯ ತಜ್ಞರ ಹೆಸರುಗಳನ್ನು ಶಿಫಾರಸ್ಸು ಮಾಡುವಾಗ ಈ ಕೆಳಕಂಡ ಅರ್ಹತೆ ಇರುವವರಿಗೆ ಆದ್ಯತೆ ನೀಡುವುದು.

1. ಕನಿಷ್ಠ 10 ವರ್ಷಗಳಿಗಿಂತ ಹೆಚ್ಚಿನ ಬೋಧನಾ ಅನುಭವವಿರಬೇಕು.
2. ಭಾಷೆ ಹೊರತುಪಡಿಸಿದಂತೆ ಇತರೆ ಐಚ್ಛಿಕ ವಿಷಯಗಳಲ್ಲಿ ವಿಷಯದ ಆಳವಾದ ಜ್ಞಾನದ ಜೊತೆಗೆ ಆಂಗ್ಲಭಾಷೆಯ ಜ್ಞಾನ ಮತ್ತು ಕನ್ನಡ ಭಾಷೆಯ ಮೇಲಿನ ಹಿಡಿತವಿರಬೇಕು.
3. ಉತ್ತಮ ಮಾತುಗಾರಿಕೆ ಉಳ್ಳವಾರಗಿರಬೇಕು.
4. ಕಂಪ್ಯೂಟರ್ ಹಾಗೂ ಅಂತರ್ಜಾಲದ ಜ್ಞಾನ ಅಪೇಕ್ಷಣೀಯ.

ಜಂಟಿ ನಿರ್ದೇಶಕರು(ಶೈಕ್ಷಣಿಕ),
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು:

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ, ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ
2. ಇ-ಆಡಳಿತ ಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ, ವೆಬ್‌ಸೈಟ್‌ನಲ್ಲಿ ಅಳವಡಿಸಲು ಮುಂದಿನ ಕ್ರಮಕ್ಕಾಗಿ.
3. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

# ಪದವಿ ಪೂರ್ವ ಶಿಕ್ಷಣ ಇಲಾಖೆ

ಅನುಬಂಧ

ಜಿಲ್ಲೆಯ ಹೆಸರು :

( ಪ್ರತಿ ವಿಷಯಕ್ಕೆ ಗರಿಷ್ಠ ಇಬ್ಬರ ಹೆಸರನ್ನು ಮಾತ್ರ ಶಿಫಾರಸ್ಸು ಮಾಡಬೇಕು)

| ಕ್ರಮ.ಸಂಖ್ಯೆ | ವಿಷಯ/<br>ವಿಷಯ ಸಂಕೇತ | ವಿಷಯಾವಾರು ತಜ್ಞರ / ಸಂಪನ್ಮೂಲ ವ್ಯಕ್ತಿಗಳ ಹೆಸರು ಕಾಲೇಜಿನ ಪೂರ್ಣ ವಿಳಾಸ ಮತ್ತು ಮೊಬೈಲ್ ಸಂಖ್ಯೆ |
|---|---|---|
| 1 | ಕನ್ನಡ(01) | 1.<br>2. |
| 2 | ಇಂಗ್ಲೀಷ್(02) | 1.<br>2. |
| 3 | ಹಿಂದಿ(03) | 1.<br>2. |
| 4 | ತಮಿಳು(04) | 1.<br>2. |
| 5 | ತೆಲುಗು(05) | 1.<br>2. |
| 6 | ಮಲಯಾಳಂ(06) | 1.<br>2. |
| 7 | ಮರಾಠಿ(07) | 1.<br>2. |
| 8 | ಉರ್ದು(08) | 1.<br>2. |
| 9 | ಸಂಸ್ಕೃತ(09) | 1.<br>2. |
| 10 | ಅರೇಬಿಕ್(11) | 1.<br>2. |
| 11 | ಫ್ರೆಂಚ್(12) | 1.<br>2. |
| 12 | ಐಚ್ಛಿಕ ಕನ್ನಡ(16) | 1.<br>2. |
| 13 | ಇತಿಹಾಸ(21) | 1.<br>2. |
| 14 | ಅರ್ಥಶಾಸ್ತ್ರ(22) | 1.<br>2. |
| 15 | ತರ್ಕಶಾಸ್ತ್ರ(23) | 1.<br>2. |
| 16 | ಭೂಗೋಳಶಾಸ್ತ್ರ(24) | 1.<br>2. |
| 17 | ಕರ್ನಾಟಕ ಸಂಗೀತ(25) | 1.<br>2. |
| 18 | ಹಿಂದೂಸ್ತಾನಿ ಸಂಗೀತ(26) | 1.<br>2. |

| | | |
|---|---|---|
| 19 | ವ್ಯವಹಾರ ಅಧ್ಯಯನ(27) | 1.<br>2. |
| 20 | ಸಮಾಜ ಶಾಸ್ತ್ರ(28) | 1.<br>2. |
| 21 | ರಾಜ್ಯಶಾಸ್ತ್ರ(29) | 1.<br>2. |
| 22 | ಲೆಕ್ಕಶಾಸ್ತ್ರ(30) | 1.<br>2. |
| 23 | ಸಂಖ್ಯಾಶಾಸ್ತ್ರ(31) | 1.<br>2. |
| 24 | ಮನಃಸಾಸ್ತ್ರ(32) | 1.<br>2. |
| 25 | ಭೌತಶಾಸ್ತ್ರ (33) | 1.<br>2. |
| 26 | ರಸಾಯನ ಶಸ್ತ್ರ(34) | 1.<br>2. |
| 27 | ಗಣಿತ (35) | 1.<br>2. |
| 28 | ಜೀವಶಾಸ್ತ್ರ(36) | 1.<br>2. |
| 29 | ಭೂಗರ್ಭಶಾಸ್ತ್ರ(39) | 1.<br>2. |
| 30 | ಎಲೆಕ್ಟ್ರಾನಿಕ್ಸ್(40) | 1.<br>2. |
| 31 | ಗಣಕ ವಿಜ್ಞಾನ(41) | 1.<br>2. |
| 32 | ಶಿಕ್ಷಣ (52) | 1.<br>2. |
| 33 | ಗೃಹ ವಿಜ್ಞಾನ(67) | 1.<br>2. |
| 34 | ಮೂಲ ಗಣಿತ(75) | 1.<br>2. |

ಸ್ಥಳ:

ದಿನಾಂಕ: ಜಿಲ್ಲಾ ಉಪನಿರ್ದೇಶಕರ ಸಹಿ

ಮೊಹರಿನೊಂದಿಗೆ.